ಲೋಹಿಯಾ ತಮ್ಮ ಧೋತಿ ಜಾರಿ ಬೀಳದಂತೆ ಹೇಗೆ ಕಟ್ಟಿಕೊಳ್ಳುತ್ತಾರೆ ಎಂದು ಅಮೆರಿಕನ್ನರು ಬೆರಗಾಗುತ್ತಿದ್ದರು! ಬೆಳಗ್ಗೆ ಲೋಹಿಯಾರನ್ನು ಕರೆದೊಯ್ಯಲು ಬಂದವರು, ಅವರು ಸ್ನಾನಕ್ಕೆ ಸುದೀರ್ಘ ಸಮಯ ತೆಗೆದುಕೊಳ್ಳುತ್ತಿದ್ದ ಪರಿಗೆ ಕಿರಿಕಿರಿಗೊಳ್ಳುತ್ತಿದ್ದರು! ಲೋಹಿಯಾ ಮಾತಾಡಿದಲ್ಲೆಲ್ಲ ಅವರ ಮಾತಿನ ಸತ್ಯ ಕೇಳುಗರನ್ನು ತಕ್ಷಣ ತಟ್ಟುತ್ತಿತ್ತು; ಜನ ಬಹುಬೇಗ ಅವರ ಆತ್ಮೀಯರಾಗಿ ಬಿಡುತ್ತಿದ್ದರು. ‘ಇಂಥ ನೇರ, ಪ್ರಾಮಾಣಿಕ ಮನುಷ್ಯ ಅಪರೂಪ’ ಎಂಬ ಉದ್ಗಾರಗಳನ್ನು ಹ್ಯಾರಿಸ್ ಹಲವು ಸಲ ಗಮನಿಸಿದ್ದರು.

ಅಮೆರಿಕ ಪ್ರವಾಸದುದ್ದಕ್ಕೂ ಲೋಹಿಯಾ ಜೊತೆಗಿದ್ದ ಹ್ಯಾರಿಸ್ ಬಗೆಬಗೆಯ ಸೇವೆ ಮಾಡುತ್ತಾ, ಅವರ ಮಾತುಕತೆಗಳನ್ನು ದಾಖಲಿಸಿ ‘ಲೋಹಿಯಾ ಅಂಡ್ ಅಮೆರಿಕ ಮೀಟ್’ ಪುಸ್ತಕ ಮಾಡಿದರು. ಈ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತಿದ್ದ ಲೋಹಿಯಾಗೆ, ಇಂಡಿಯಾದಲ್ಲಿನ ಅರ್ಪಣಾ ಮನೋಭಾವಕ್ಕೂ ಪಶ್ಚಿಮದಲ್ಲಿ ಕಾಣುವ ಅರ್ಪಣಾ ಮನೋಭಾವಕ್ಕೂ ಇರುವ ವ್ಯತ್ಯಾಸ ಸ್ಪಷ್ಟವಾಗಿ ಕಂಡಿತು:

‘ಹ್ಯಾರಿಸ್ ನನ್ನ ಜೊತೆಯೇ ಇದ್ದು ನನ್ನ ಎಲ್ಲ ಅಗತ್ಯಗಳನ್ನೂ ನೋಡಿಕೊಳ್ಳುತ್ತಿದ್ದ; ನಾನು ಮಾತಾಡಿದ್ದನ್ನೆಲ್ಲ ದಾಖಲಿಸುತ್ತಿದ್ದ. ಒಂದು ಸಲ ಹ್ಯಾರಿಸ್ ಸಿಡಿಮಿಡಿಗೊಂಡು, ‘ಎಸ್.ಒ.ಬಿ.’ ಎಂದು ಜೋರಾಗಿಯೇ ಗುರುಗುಟ್ಟಿದ; ಇದು ಅಮೆರಿಕನ್ ಆಡುಭಾಷೆಯಲ್ಲಿ ‘ಸನ್ ಆಫ್ ಎ ಬಿಚ್’ನ ಸಂಕ್ಷಿಪ್ತ ರೂಪ! ‘ನಿನಗೆ ಮಾಡ್ತಿರೋ ಸೇವೇನ ನಾನು ಅಮೆರಿಕನ್ ಪ್ರೆಸಿಡೆಂಟ್‌ಗೂ ಮಾಡಲ್ಲ’ ಎಂದು ಕೂಡ ಹ್ಯಾರಿಸ್ ರೇಗಿದ್ದ! ಆದರೂ ಅರ್ಧ ಮೈಲು ಕುರಿಯಂತೆ ಹೋಗಿ ನನಗಾಗಿ ಕಾಫಿ ತರುತ್ತಿದ್ದ!’

ಭಾರತ ಮತ್ತು ಅಮೆರಿಕಗಳಲ್ಲಿನ ಅರ್ಪಣಾ ಮನೋಭಾವದಲ್ಲಿರುವ ವ್ಯತ್ಯಾಸವನ್ನು ಆಗಾಗ ಗಮನಿಸಿದ್ದೇನೆ. ಭಾರತದ ಅರ್ಪಣಾ ಮನೋಭಾವ ಅತಿಯಾಗಿ ಗೌರವ ಸೂಚಿಸುವಂಥದು; ‘ನಾನೇನೂ ಅಲ್ಲ, ಎಲ್ಲವೂ ನೀನೇ’ ಎಂಬಂತೆ ವರ್ತಿಸುವುದು; ಅರ್ಪಿಸಿಕೊಂಡ ವ್ಯಕ್ತಿಯ ಕಾಲು ಹಿಡಿಯುವುದು, ಹಾರ ಹಾಕುವುದು... ಇದೆಲ್ಲ ಅಸಹ್ಯ ಹುಟ್ಟಿಸುವಷ್ಟು ಪದೇ ಪದೇ ನಡೆಯುತ್ತಿರಬಲ್ಲದು.

ಆದರೆ ಯುರೋಪಿನ ಅಥವಾ ಅಮೆರಿಕದ ಅರ್ಪಣಾ ಮನೋಭಾವ ಯಾವುದೇ ಆಚರಣೆ, ಸಂಕೇತಗಳ ಮೂಲಕ ವ್ಯಕ್ತವಾಗುವುದಿಲ್ಲ. ಅವರು ಮಾಡುವ ಕೆಲಸಗಳು ಫಲ ಕೊಡುತ್ತವೆ. ಎಷ್ಟೋ ಸಲ ಅವರ ಕೆಲಸ ಪರಮತ್ಯಾಗವನ್ನೂ ಒಳಗೊಂಡಿರುತ್ತದೆ. ಈ ಎರಡು ಮಾದರಿಗಳ ನಡುವಣ ವ್ಯತ್ಯಾಸ ಸದಾ ಹೀಗೇ ಇರುತ್ತದೆ ಎನ್ನಲಾರೆ. ಆದರೂ ಯೂರೋಪ್, ಅಮೆರಿಕನ್ ಅರ್ಪಣಾ ಗುಣವನ್ನೇ ನಾನು ಆಯ್ಕೆ ಮಾಡಿಕೊಳ್ಳುತ್ತೇನೆ ಎಂಬುದನ್ನೇನೂ ನಾನು ಬಚ್ಚಿಡುವುದಿಲ್ಲ.’

ಪಶ್ಚಿಮದ ಈ ಬಗೆಯ ಶಿಸ್ತನ್ನು ಮೈಗೂಡಿಸಿಕೊಂಡಿದ್ದ ಅರ್ಪಣಾ ಮನೋಭಾವದ ಗೆಳೆಯ, ಗೆಳತಿಯರು ಭಾರತದಲ್ಲೂ ಲೋಹಿಯಾಗೆ ಸಿಕ್ಕರು. ಇದು ಲೋಹಿಯಾ ವ್ಯಕ್ತಿತ್ವದ ಪ್ರಭಾವದಿಂದಲೂ ಆಗಿರಬಹುದು. ದೊಡ್ಡ ಚಿಂತಕ–ನಾಯಕನೊಬ್ಬ ತನ್ನ ನಡೆನುಡಿಗಳಿಂದಲೇ ಇಂಥ ಸಂಗಾತಿಗಳನ್ನು ಸೃಷ್ಟಿ ಮಾಡುತ್ತಿರುತ್ತಾನೆ. 1961ರ ಸುಮಾರಿಗೆ ‘ಲೋಹಿಯಾ ಅಂಡ್ ಅಮೆರಿಕ ಮೀಟ್’ ಪುಸ್ತಕದ ಭಾರತೀಯ ಆವೃತ್ತಿಯನ್ನು ಸಮಾಜವಾದಿ, ಕಲಾವಿದೆ, ಸ್ನೇಹಲತಾರೆಡ್ಡಿ ಮದರಾಸಿನಲ್ಲಿ ಟೈಪ್ ಮಾಡಿ, ಎಡಿಟ್ ಮಾಡುತ್ತಿದ್ದರು; ಲೋಹಿಯಾ ನೇತೃತ್ವದಲ್ಲಿ ಹೊರಬರುತ್ತಿದ್ದ ‘ಮ್ಯಾನ್‌ಕೈಂಡ್’ ಮಾಸಪತ್ರಿಕೆಯ ಸಂಪಾದಕೀಯ ಬಳಗದಲ್ಲಿದ್ದ ಪುಟಗಳನ್ನು ಅಚ್ಚಿಗೆ ಸಿದ್ಧಪಡಿಸುತ್ತಿದ್ದರು. ಈ ಗಳಿಗೆಗಳನ್ನು ಸ್ನೇಹಲತಾರ ಮಗಳು ನಂದನಾರೆಡ್ಡಿ ನೆನೆಯುತ್ತಾರೆ.

ದೊಡ್ಡ ಚಿಂತಕ–ರಾಜಕಾರಣಿಯೊಬ್ಬ ತನ್ನ ವಲಯಕ್ಕೆ ಬಂದವರನ್ನೆಲ್ಲ ಸೂಕ್ಷ್ಮವಾಗಿಸುವ ರೀತಿಗಳು ಲೋಹಿಯಾ ಜೊತೆಗಿದ್ದು ಅವರ ಭಾಷಣ, ಬರಹಗಳನ್ನು ಎಡಿಟ್ ಮಾಡಿ, ಅನುವಾದಿಸಿ, ಪುಸ್ತಕ ರೂಪದಲ್ಲಿ ಪ್ರಕಟಿಸಿದವರಲ್ಲೂ ಕಾಣುತ್ತದೆ. ಅವರೆಲ್ಲ ಭಾರತದ ಸೂಕ್ಷ್ಮ ಸಮಾಜವಾದಿ ಚಿಂತಕ, ಚಿಂತಕಿಯರೂ ಆದರು. ಇದೆಲ್ಲ ಭಾರತದ ಆಧುನಿಕ ಬೌದ್ಧಿಕ ಪರಂಪರೆಯ ಭಾಗವಾಗಿದೆ.

ಅಮೆರಿಕದಲ್ಲಿ ಬಗೆಬಗೆಯ ಜನರನ್ನು, ನಾಯಕರನ್ನು, ಮಹಿಳೆಯರನ್ನು, ಬುದ್ಧಿಜೀವಿಗಳನ್ನು ಲೋಹಿಯಾ ಭೇಟಿ ಮಾಡಿದರು. ನೊಬೆಲ್ ಪ್ರಶಸ್ತಿ ವಿಜೇತ ಲೇಖಕಿ ಪರ್ಲ್ ಎಸ್ ಬಕ್ ಮನೆಯಲ್ಲಿ ಲೋಹಿಯಾ ಒಂದು ದಿನ ಇದ್ದರು. ಮಾತಿನ ನಡುವೆ ಬಕ್, ‘ನಿಮ್ಮ ದೇಶದಲ್ಲಿ ಎಂದಾದರೂ, ಯಾವಾಗಲಾದರೂ ಒಂದು ಸೆಲ್ಫ್ ಇನ್ನೊಂದು ಸೆಲ್ಫ್ ಅನ್ನು ಭೇಟಿ ಮಾಡುತ್ತದೆಯೆ?’ ಎಂದು ಕೇಳಿದರು.

ಈ ಬಹುಸೂಕ್ಷ್ಮ ಪ್ರಶ್ನೆಯ ಬಗ್ಗೆ ಲೋಹಿಯಾ ಸುದೀರ್ಘವಾಗಿ ಚಿಂತಿಸತೊಡಗಿದರು. ಯುಗೋಸ್ಲಾವಿಯಾದ ಲೇಖಕಿ ಮದಾಂ ಸೆಕ್ಯುಲಿಚ್ ‘ಇಂಡಿಯಾದಲ್ಲಿ ಬೆಳಗು ಹೇಗಿರುತ್ತದೆ?’ ಎಂದರು. ಸೆರೆಮನೆಯಲ್ಲಿದ್ದಾಗ ಬೆಳಗು ಕಂಡ ನೆನಪಾದರೂ, ಬೆಳಗನ್ನು ವಿವರಿಸಲು ಲೋಹಿಯಾಗೆ ಆಗಲಿಲ್ಲ!

ಇಬ್ಬರು ಲೇಖಕಿಯರು ಹಾಗೂ ಜಪಾನಿನ ಗೀಷಾ – ಈ ಮೂವರ ಪ್ರಶ್ನೆಗಳನ್ನು ಉತ್ತರಿಸಲಾಗದ ತಮ್ಮ ಅಸಾಮರ್ಥ್ಯ ಲೋಹಿಯಾರಲ್ಲಿ ಆನಂದವನ್ನೇ ಹುಟ್ಟಿಸಿತ್ತು; ಕಾರಣ, ಇಲ್ಲಿ ಮಹಿಳೆಯ ಕೈ ಮೇಲಾಗಿತ್ತು!

ಲೋಹಿಯಾ ಅಮೆರಿಕದಲ್ಲಿದ್ದಾಗಲೂ ಇಂಡಿಯಾದಲ್ಲೇನಾಗುತ್ತಿದೆ ಎಂಬುದನ್ನು ತಿಳಿಯುತ್ತಲೇ ಇದ್ದರು. ಒಂದು ದಿನ ಕಾಶ್ಮೀರ ಸಮಸ್ಯೆಯ ಬಗ್ಗೆ ತಮ್ಮ ನಿಲುವು ಕುರಿತು ಭಾರತದ ಪತ್ರಿಕೆಗಳಿಗೆ ಹೇಳಿಕೆ ಕಳಿಸಲು ಅಮೆರಿಕದ ಭಾರತೀಯ ರಾಯಭಾರ ಕಚೇರಿಗೆ ಹೋದರು. ರಾಯಭಾರ ಕಛೇರಿ ಮುಚ್ಚಿತ್ತು.

‘ಬುಧವಾರ ಯಾಕೆ ಕಚೇರಿ ಮುಚ್ಚಿದೆ?’ ಎಂದರು ಲೋಹಿಯಾ.

‘ಆಗಸ್ಟ್ ಹದಿನೈದು’ ಎಂದ ಅಲ್ಲಿನ ಸಿಬ್ಬಂದಿ.

‘ಓಹ್! ಮತ್ತೊಂದು ಆಗಸ್ಟ್ ಹದಿನೈದು ಬಂತು!’, ಉದ್ಗರಿಸಿದರು ಲೋಹಿಯಾ.

ಅಮೆರಿಕದ ಭೇಟಿಯಲ್ಲಿ ಲೋಹಿಯಾ ಮನಸ್ಸಿನಲ್ಲಿ ಉಳಿದ ಹಲವರಲ್ಲಿ ನಾಗರಿಕ ಹಕ್ಕುಗಳ ಹೋರಾಟಗಾರ ವಾಲ್ಟರ್ ರೂಥರ್ ಕೂಡ ಒಬ್ಬರು. ರೂಥರ್ ನಾಯಕತ್ವದ ಗುಣಗಳಿದ್ದವರು. ಅಮೆರಿಕದ ಕ್ಷೌರಿಕರೊಬ್ಬರ ಮಗನಾಗಿದ್ದ ರೂಥರ್ ಏರಿದ ಎತ್ತರ, ಅವರ ಖಚಿತತೆ, ನಿಲುವುಗಳನ್ನು ನೋಡಿದ ಲೋಹಿಯಾಗೆ ಭಾರತದ ಸ್ಥಿತಿ ನೆನಪಾದಾಗ ಹೀಗೆನ್ನಿಸಿತು: ‘ನಮ್ಮ ದೇಶದ ಕ್ಷೌರಿಕರ, ಅಗಸರ ಮನೆಯ ಹುಡುಗ ಹುಡುಗಿಯರು ಇಷ್ಟೇ ಶಕ್ತಿಸಾಧ್ಯತೆ ಇರುವವರು. ಅವರೆಲ್ಲ ದೇಶದ ಪ್ರಮುಖ ಆಗುಹೋಗುಗಳ ಬಗ್ಗೆ ಅಧಿಕಾರವಾಣಿಯಿಂದ ಮಾತಾಡುವ ಕಾಲ ಯಾವಾಗ ಬರುತ್ತದೋ ಎಂದು ನಿಟ್ಟುಸಿರು ಬಿಡುವಂತಾಗುತ್ತದೆ.’

ಆದರೆ ಲೋಹಿಯಾ ನಿಟ್ಟುಸಿರು ಬಿಟ್ಟು, ಆ ನಿಟ್ಟುಸಿರನ್ನೇ ಆನಂದಿಸುವ ಸಾಧಾರಣ ಬುದ್ಧಿಜೀವಿಯಾಗಿರಲಿಲ್ಲ! ಲೋಹಿಯಾರ ಇಂಥ ವಿಷಾದ ಸಮಾಜವಾದಿ ಪಕ್ಷವನ್ನು ಎಲ್ಲ ತಬ್ಬಲಿ ಜಾತಿಗಳ ಪಕ್ಷವನ್ನಾಗಿ ಕಟ್ಟುವ ದಿಕ್ಕಿಗೆ ಅವರನ್ನು ಒಯ್ದಿತು. 1952ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಕ್ಷೌರಿಕ ಸಮುದಾಯದ ಕರ್ಪೂರಿ ಠಾಕೂರ್ ತಮ್ಮ ಇಪ್ಪತ್ತೆಂಟನೆಯ ವಯಸ್ಸಿನಲ್ಲಿ ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿ ಬಿಹಾರ ವಿಧಾನಸಭೆಯ ಶಾಸಕರಾದರು; ಮುಂಚೂಣಿ ಸಮಾಜವಾದಿ ನಾಯಕರಾದರು. ಬಿಹಾರದ ಮುಖ್ಯಮಂತ್ರಿಯಾದರು. ಸಮಾಜವಾದಿ ಪಕ್ಷ ರೂಪಿಸಿದ ಸಾಮಾಜಿಕ ನ್ಯಾಯದ ರಾಜಕಾರಣ ಹಿಂದುಳಿದ, ಅತಿ ಹಿಂದುಳಿದ ಜಾತಿಗಳ ರಾಜಕೀಯ ಅಧಿಕಾರದ ಸಾಧ್ಯತೆಯನ್ನು ದೊಡ್ಡ ಮಟ್ಟದಲ್ಲಿ ತೆರೆಯಿತು; ದೇಶದ ರಾಜಕೀಯ ನಕಾಶೆ ಬದಲಾಯಿತು.

ಲೋಹಿಯಾ ವಿಶ್ವಪರ್ಯಟನ ಮುಗಿಸಿ ಮರಳುವ ಹಾದಿಯಲ್ಲಿ ಟೋಕಿಯೋದಿಂದ ರಮಾ ಮಿತ್ರರಿಗೆ ಬರೆದ ಒಂದು ತುಂಟ ಪತ್ರ:

ಪ್ರೀತಿಯ ಇಳಾ,

ಹವಾಯಿ ದ್ವೀಪ ಹಲವು ಖಂಡಗಳು ಸಂಗಮವಾಗುವ ಸ್ಥಳ. ವಿಮಾನ ನಿಲ್ದಾಣ ತಲುಪಿದಾಗ ಇಬ್ಬರು ಹೆಂಗಳೆಯರು ನನಗೆ ಮುತ್ತಿಟ್ಟು ಸ್ವಾಗತಿಸಿದರು; ವಿದಾಯ ಹೇಳುವಾಗ ಆರು ಮಂದಿ ಹೆಂಗಳೆಯರು ನನಗೆ ಮುತ್ತಿಟ್ಟು ಬೀಳ್ಕೊಟ್ಟರು. ಆದರೆ ಇದು ಈ ಎರಡೂ ಘಟ್ಟಗಳ ನಡುವೆ ಕೂಡ ನಡೆಯಬಹುದಿತ್ತೇ ಎಂದು ಕೇಳಲು ತೀರಾ ನಾಚಿಕೊಂಡೆ.

ನಿನ್ನ

ರಾಮ್ ಮನೋಹರ್

ಭಾರತಕ್ಕೆ ಹಿಂದಿರುಗಿದ ಲೋಹಿಯಾ ಪೂರ್ಣ ಪ್ರಮಾಣದ ರಾಜಕಾರಣಕ್ಕೆ ಧುಮುಕಲೇಬೇಕಾಗಿತ್ತು. ಭಾರತದ ಪ್ರಥಮ ಸಾರ್ವತ್ರಿಕ ಚುನಾವಣೆಗಳು ಹತ್ತಿರವಾಗತೊಡಗಿದ್ದವು.

(ಸಶೇಷ)